ಮಾನ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಈಗ ಹಾಕಿರತಕ್ಕಂಥ ಎರಡು ಬಸ್‌ಗಳು ಸಾಲುವುದಿಲ್ಲ. ಅಲ್ಲಿ ಪ್ರಮುಖವಾಗಿ ಮಧ್ಯದಾಳೇಶ್ವರ ಎನ್ನುವ ಒಂದು ದೇವಸ್ಥಾನ ಇದೆ. ಆ ಭಾಗಕ್ಕೆ ಬಸ್‌ನ್ನು ಕಳುಹಿಸಿ ಕೊಡಿ ಎಂದು ಎರಡು ಪತ್ರಗಳನ್ನು ಬರೆದಿದ್ದೇನೆ. ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಭೀಮಣ್ಣ ಖಂಡ್ರೆ:– ಪತ್ರವನ್ನು ಬರೆದಿದ್ದೀರಿ. ಅದನ್ನು ತನಿಖೆ ಮಾಡಿಸುತ್ತಿದ್ದೇವೆ. ಸಾಧ್ಯವಾದಷ್ಟು ಹೆಚ್ಚು ಬಸ್‌ಗಳನ್ನು ಅಲ್ಲಿಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:– ಮೂರು ವರ್ಷಗಳಿಂದ ನಾವು ಬಸ್‌ನ ಅವಶ್ಯಕತೆ ಬಗ್ಗೆ ನಿಮ್ಮ ಇಲಾಖೆಗೆ ಕಾಗದಗಳನ್ನು ಬರೆದಿದ್ದೇವೆ. ನಿಮ್ಮ ಇಲಾಖೆಯವರು ಮೈಸೂರು – ಬೆಂಗಳೂರು ಕಮ್ಯೂಟರ್ಸ್ ನೆನಪಿನಲ್ಲಿಟ್ಟುಕೊಂಡು ನಾನ್‌ಸ್ಟಾಪ್ ಬಸ್ ಕಡೆ ಗಮನವನ್ನು ಕೊಡುತ್ತಿದ್ದಾರೆಯೇ ಹೊರತು ನಮ್ಮ ಗ್ರಾಮಾಂತರ ಪ್ರದೇಶದ ಬಸ್‌ನ ವ್ಯವಸ್ಥೆಯಾಗಿಲ್ಲ. ತಾವು ದಯವಿಟ್ಟು ವರದಿಯನ್ನು ತರಿಸಿ ನಮ್ಮ ಕಾಗದದ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಶ್ರೀ ಭೀಮಣ್ಣ ಖಂಡ್ರೆ:– ಮಾಡಿಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಂಡ್ಯ ಜಿಲ್ಲೆಯಲ್ಲಿ ಪ್ರಸ್ತುತ ಒಂದೇ ಬಸ್ ಡಿಪೋ ಇದೆ. ಜಿಲ್ಲೆ ಸಾಕಷ್ಟು ದೊಡ್ಡದಾಗಿದ್ದು ಬೇರೆ ಯಾವುದಾದರೂ ಒಂದು ತಾಲ್ಲೂಕು ಕೇಂದ್ರದಲ್ಲಿ ಒಂದು ಬಸ್ ಡಿಪೋವನ್ನು ಮಾಡುವುದಕ್ಕೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಈಗ ಉತ್ತರ ಕೊಟ್ಟೆ. ಹಣದ ಕೊರತೆ ಇದೆ. ಈಗ ಸಧ್ಯದಲ್ಲಿ ಇದು ಆಗುವುದಕ್ಕೆ ಸಾಧ್ಯವಿಲ್ಲ. ನಿಮ್ಮದು ಈಗಾಗಲೇ ಇದ್ದದ್ದು ಏನು ಇದೆ, ಅದಕ್ಕೆ ಮಾತ್ರ ರಿಪೇರಿ ಮಾಡಿ ಸರಿ ಮಾಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮುಂದೆ ಹಣ ಬಂದಾಗ ಅಥವಾ ನಮ್ಮಲ್ಲಿ ಹಣ ಹೆಚ್ಚಾದಾಗ ನಾವು ಇದನ್ನು ವಿಚಾರ ಮಾಡುತ್ತೇವೆ.

ರಾಜ್ಯದ ಸಾರಿಗೆ ಸಂಸ್ಥೆಯ ಖಾಸಗೀಕರಣ.

7. ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ಬಗ್ಗೆ ಸರ್ಕಾರದವರ ನಿಲುವೇನು ?

ಆ) ಈಗ ಖಾಸಗೀ ವಲಯದಲ್ಲಿ ಸಂಚರಿಸುತ್ತಿರುವ ಬಸ್ಸುಗಳೆಷ್ಟು ಹಾಗೂ ಸರ್ಕಾರದ ಸಾರಿಗೆ ಸಂಸ್ಥೆಯ ಒಡೆತನದಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ.

ಆ) ಖಾಸಗೀ ವಲಯಗಳಲ್ಲಿ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ: 3238.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ದಿನಾಂಕ: 21–11–92ಕ್ಕೆ 8606 ಬಸ್ಸುಗಳನ್ನು ಓಡಿಸುತ್ತಿದೆ.

ಶ್ರೀ ಕೆ. ಹರ್ಷಕುಮಾರ ಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯದಲ್ಲಿ ಸಾರಿಗೆ ಸಂಸ್ಥೆಯ ಈ ವ್ಯವಸ್ಥೆಯಲ್ಲಿ ಖಾಸಗೀಕರಣ ಮಾಡುತ್ತೇವೆ ಎಂದು ಸರ್ಕಾರ ಹೇಳಿಕೊಂಡು ಬಂದಿತ್ತು. ಕಳೆದ

ಸರ್ಕಾರದಲ್ಲಿ ಇದ್ದಂಥ ಸಾರಿಗೆ ಮಂತ್ರಿಗಳು ಅಜೀಜ್ ಸೇಠ್‌ರವರು ಹೇಳುತ್ತಿದ್ದರು. ಖಾಸಗೀಕರಣ ಆಗುತ್ತದೆ ಎಂದು ಹೇಳಿದ್ದರು. ಅದರ ಬಗ್ಗೆ ಕೂಡ ಬಹಳಷ್ಟು ಚರ್ಚೆಯಾಗುತ್ತಿತ್ತು, ಇಡೀ ರಾಜ್ಯದಲ್ಲಿ ಸುದ್ದಿ ಮಾಧ್ಯಮಗಳಿಂದಲೂ ಕೂಡ ಆಗುತ್ತಿತ್ತು. ಈಗ ಮಂತ್ರಿಗಳು ಹೇಳುತ್ತಿದ್ದಾರೆ, ಇದರ ಬಗ್ಗೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು. ನಾನು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ, ತಾವು ರಾಜ್ಯದಲ್ಲಿ ಈ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣ ಮಾಡುತ್ತೀರಾ ? ಇಲ್ಲ, ಸರ್ಕಾರದ ವಶದಲ್ಲಿ ಇಟ್ಟುಕೊಳ್ಳುತ್ತೀರಾ ಎನ್ನುವುದು ಒಂದು. ಜೊತೆಗೆ ಸಾರಿಗೆ ಸಂಸ್ಥೆ ನಷ್ಟದಲ್ಲಿದೆಯೇ ? ಅದರಿಂದ ಖಾಸಗೀಕರಣವನ್ನು ಮಾಡಬೇಕಾಗುತ್ತದೆ ಎಂದು ಹೇಳಿ ಸುದ್ದಿ ಮಾಧ್ಯಮಗಳಿಗೆ ಪ್ರಚಾರವನ್ನು ಕೊಡುತ್ತಿರುತ್ತೀರಿ. ಅದು ಲಾಭದಲ್ಲಿದೆಯೋ ? ನಷ್ಟದಲ್ಲಿದೆಯೋ ? ನಷ್ಟದಲ್ಲಿದ್ದರೆ ಎಷ್ಟು ನಷ್ಟದಲ್ಲಿದೆ ಎಂದು ಹೇಳಬೇಕು.

ಶ್ರೀ ಭೀಮಣ್ಣ ಖಂಡ್ರೆ:– ತಮ್ಮ ಪ್ರಶ್ನೆ ಏನು ಇದೆ ಎಂದರೆ "What is the policy of the Government regarding privatisation of State Transport Corporation." ಸ್ಟೇಟ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ನ್ನು ಪ್ರೈವೇಟೈಜ್ ಮಾಡುವುದು ನಮ್ಮಲ್ಲಿ ಇಲ್ಲ. ಅದು ಆಗುವುದಿಲ್ಲ, ಅದನ್ನು ಮಾಡುವುದಿಲ್ಲ. ಏಕೆಂದರೆ ಅಲ್ಲಿ 58 ಸಾವಿರ ಜನರು ಕೆಲಸವನ್ನು ಮಾಡುತ್ತಿದ್ದಾರೆ. 9 ಸಾವಿರ ಬಸ್‌ಗಳು ಓಡಾಡುತ್ತಿವೆ. ನಷ್ಟದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೀರಿ, ಅದಕ್ಕೆ ಬೇರೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ. ಎಷ್ಟು ನಷ್ಟವಾಗಿದೆ ಮತ್ತು ಎಷ್ಟರ ಮಟ್ಟಿಗೆ ಸುಧಾರಿಸಬೇಕು ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಇಲ್ಲಿ ಪ್ರಶ್ನೆ ಏನು ಕೇಳಿದ್ದೀರಿ, ಪ್ರೈವೇಟೈಜೇಷನ್ ಬಗ್ಗೆ ಕೇಳಿದ್ದೀರಿ, ಎರಡನೆಯದು

"How many buses are running in private sector and number of buses owned by the State Transport Corporation" ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಪ್ರೈವೇಟ್ ಬಸ್‌ಗಳು 3238 ಓಡಾಡುತ್ತಿವೆ. 8600 ಬಸಸ್ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಇವೆ.

ಶ್ರೀ ಕೆ. ಹರ್ಷಕುಮಾರ ಗೌಡ: ಮಾನ್ಯ ಅಧ್ಯಕ್ಷಿಣಿಯವರೆ, ನಮಗೆ ಸ್ಪಷ್ಟವಾಗಿ ಉತ್ತರ ಬೇಕು. ಈ ಸದನದಲ್ಲಿ ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ. ನೀವು ಖಾಸಗೀಕರಣವನ್ನು ಮಾಡುವುದಿಲ್ಲ ಎಂದು ಈ ಸಭೆಯಲ್ಲಿ ಭರವಸೆ ಕೊಡುತ್ತೀರಾ ?

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಇವತ್ತು ಹೇಳುತ್ತಿದ್ದೇನೆ. ಖಾಸಗೀಕರಣ ಮಾಡುವುದಿಲ್ಲ. ಏನೋ 9 ಡಿಪ್ಪಿಕ್ಟ್‌ಗಳಲ್ಲಿ ಖಾಸಗೀಕರಣ ಆಗಿದೆ. ಉಳಿದ ಜಿಲ್ಲೆಗಳಲ್ಲಿ ಖಾಸಗೀಕರಣವನ್ನು ಮಾಡುವುದಿಲ್ಲ.

DY. SPEAKER:– So the question 52 (438) the hon'ble Minister has asked for one week's time. So it will be taken up later.

ಗುಲ್ಬರ್ಗ ಜಿಲ್ಲೆಯಲ್ಲಿ ಬಸ್ಸುಗಳ ಮೇಲೆ ಜನಗಳ ಪ್ರವಾಸ.

339. ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹಳ್ಳಿಗಳಿಗೆ ಮತ್ತು ಪಟ್ಟಣಗಳಿಗೆ ಹೋಗುವ ಬಸ್ಸುಗಳ ಛಾವಣಿಯ ಮೇಲೆ ಜನಗಳು ಕುಳಿತುಕೊಂಡು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?